## ಶಕ್ತಿ ಪೀಠ ನಶಿಸದಿರಲಿ



ನಾಡಿನ ಶಕ್ತಿಪೀಠ ಪಶ್ಚಿಮಘಟ್ಟಗಳ ಬಗ್ಗೆ ಟಿ.ಎಂ. ಶಿವಶಂಕರ್ ಬರೆದ (ಆ.12) ಲೇಖನ ಬಹಳ ಸರಳ ಮತ್ತು ಸೊಗಸಾಗಿತ್ತು. ಮಾನವರ ದಾಳಿಯಿಂದ ಘಟ್ಟ ಅವನತಿ ಹೊಂದುತ್ತಿರುವ ಬಗ್ಗೆ ಎಳೆ, ಎಳೆಯಾಗಿ ವಿವರಿಸಿದ್ದಾರೆ. ಶಕ್ತಿಪೀಠದ ಉಳಿವಿನ ಮೇಲೆ ನಮ್ಮ ಬದುಕು ನಿಂತಿದೆ. ಈ ಘಟ್ಟದ ಹುಟ್ಟಿನ ಬಗ್ಗೆ ಬಹಳ ದಿನಗಳಿಂದ ಕಾಡುತ್ತಿದ್ದ ಸಂಶಯ ‘ಸುಧಾ’ ಪತ್ರಿಕೆಯಲ್ಲಿ ಪ್ರಕಟವಾದ ಈ ಲೇಖನ ಓದಿದ ಮೇಲೆ ನಿವಾರಣೆ ಆಗಿದೆ. ಘಟ್ಟಶ್ರೇಣಿಗಳು ಜಾರಿಬೀಳುವ ಕಾರಣದ ವೈಜ್ಞಾನಿಕ ಸಲಹೆಯನ್ನು ಸರ್ಕಾರ ಪರಾಂಬರಿಸಿ ಪಶ್ಚಿಮಘಟ್ಟಕ್ಕೆ ತೊಂದರೆ ಆಗದಂತೆ ಜನರ ಬದುಕನ್ನು ರಕ್ಷಿಸುವ ಕೆಲಸದತ್ತ ಗಮನ ಹರಿಸಲಿ.

—ಮಂಗಳ, ಬೆಂಗಳೂರು

## ಗ್ರಾಮ ಭಾರತ ಗಾಂಧಿ ಭಾರತ

ಆ. 12ರ ಸಂಚಿಕೆಯಲ್ಲಿ ಕಾರಂತ ಪೆರಾಜೆ ಅವರ ‘ಗ್ರಾಮ ಭಾರತ ಗಾಂಧಿ ಭಾರತ’ ಲೇಖನ ಓದಿದೆ. ಸುಳ್ಯ ತಾಲ್ಲೂಕಿನ ಮೊಗ್ರ ಗ್ರಾಮದ ನಾಲ್ಕು ಜನ ಜನಪ್ರತಿನಿಧಿಗಳು ಸೇರಿ ಗ್ರಾಮದ ಮೂಲಭೂತ ಸೌಕರ್ಯಗಳನ್ನು ಆ ಗ್ರಾಮದ ಜನರಿಗೆ ಒದಗಿಸಿರುವುದು ಅನುಕರಣೀಯ. ಕ್ಷುಲ್ಲಕ ವಿಷಯಗಳ ಬಗ್ಗೆ ದಿನಗಟ್ಟಲೆ ಪ್ರಸಾರ ಮಾಡುವ ನಮ್ಮ ವಿದ್ಯುನ್ಮಾನ ಸಂಸ್ಥೆಗಳು ಇಂತಹ ಗ್ರಾಮದ ಬಗ್ಗೆ ಒಂದು ಗಂಟೆ ಪ್ರಸಾರ ಮಾಡಿದರೆ ನಮ್ಮ ರಾಜ್ಯದಲ್ಲಷ್ಟೇ ಅಲ್ಲದೆ ದೇಶದೆಲ್ಲೆಡೆ ಮೊಗ್ರದಂತಹ ಗ್ರಾಮಗಳು ಸ್ವಾವಲಂಬಿಯಾಗಿ ಗಾಂಧೀಜಿಯವರು ಕಂಡ ಕನಸಿನಂತೆ ನಾವು ನಿಜವಾದ ಭಾರತವನ್ನು ಹಳ್ಳಿಗಳಲ್ಲಿ ಕಾಣಬಹುದು.

—ಪುಂಡಲೀಕ ಸಾದುರೆ, ಬೆಂಗಳೂರು

‘ಸುಧಾ’ ಓದುಗರಿಗೆ ಮೊಗ್ರ ಎನ್ನುವ ಗ್ರಾಮ ನಮ್ಮ ರಾಜ್ಯದಲ್ಲಿದೆ ಎಂದು ಪರಿಚಯಿಸಿದ ನಾ. ಕಾರಂತ ಪೆರಾಜೆಗೆ ಒಂದು ಸಲಾಂ. ಜನ ಮನಸು ಮಾಡಿದರೆ ಯಾವ ರೀತಿ ಗ್ರಾಮವೊಂದು ಪರಿಕಲ್ಪನೆಗೆ ಮೀರಿ ಪ್ರಗತಿ ಹೊಂದಬಹುದು ಹಾಗೂ ಇತರ ಗ್ರಾಮಗಳಿಗೆ ಮೊಗ್ರ ಮಾದರಿಯಾಗಬಲ್ಲದು.

—ಎಂ.ಆರ್. ಚಂದ್ರಶೇಖರ್, ಬೆಂಗಳೂರು

ಕಣ್ಣು ತೆರೆಸುವ ಲೇಖನ. ನಿಸ್ವಾರ್ಥ ಕಾಯಕ ಯೋಗಿಗಳಿಗೆ ಅಭಿನಂದನೆಗಳು.

—ಎಚ್.ವಿ. ರಾಮಚಂದ್ರರಾವ್, ಬೆಂಗಳೂರು

ಲೇಖನ ತುಂಬಾ ಚೆನ್ನಾಗಿ ಮೂಡಿ ಬಂದಿದೆ. ಲೇಖಕರಿಗೆ ಧನ್ಯವಾದಗಳು. ನನ್ನನ್ನೂ ಸೇರಿಸಿ ಪ್ರಜ್ಞಾವಂತ ಪ್ರಜೆಗಳು ಮತ್ತು ಹಳ್ಳಿಗಳ ನಾಗರಿಕರು ಭೇದಭಾವ ಇಲ್ಲದೆ ಒಟ್ಟಾಗಿ ದುಡಿದರೆ ಸ್ವರಾಜ್ಯದ ಕನಸು ನನಸಾಗಲಿದೆ.

—ವಿಶ್ವ ಪಾಟೀಲ

### ಚಡಗ ಪ್ರಶಸ್ತಿಗೆ ಆಹ್ವಾನ

ಚಡಗ ಕಾದಂಬರಿ ಪ್ರಶಸ್ತಿಗೆ 2020ರಲ್ಲಿ ಪ್ರಥಮ ಆವೃತ್ತಿಯಾಗಿ ಪ್ರಕಟವಾದ ಕಾದಂಬರಿಗಳನ್ನು ಆಹ್ವಾನಿಸಲಾಗಿದೆ.

ಆಸಕ್ತರು ತಮ್ಮ ಕೃತಿಯ ಮೂರು ಪ್ರತಿಗಳನ್ನು ಸೆ. 30ರ ಒಳಗೆ ತಲುಪುವಂತೆ ಕಳಿಸಿಕೊಡಬೇಕು. ವಿಳಾಸ: ಉಪೇಂದ್ರ ಸೋಮಯಾಜಿ, ‘ಶ್ರೀ’ ಚಿತ್ರಪಾಡಿ, ಅಂಚೆ: ಸಾಲಿಗ್ರಾಮ, ಉಡುಪಿ ಜಿಲ್ಲೆ 575225 ದೂ: 9740842722 ಈ ಪ್ರಶಸ್ತಿಯು, ಪ್ರಶಸ್ತಿ ಪತ್ರ, ಸ್ಮರಣಿಕೆ, ಹಾಗೂ ₹ 10000 ನಗದನ್ನು ಒಳಗೊಂಡಿದೆ.

## ಒಳ್ಳೆಯ ಕಥೆ

ಆ. 12ರ ಸಂಚಿಕೆಯಲ್ಲಿ ಪ್ರಕಾಶ್ ಎಸ್. ಮನ್ನಂಗಿ ಅವರ ‘ಇಷ್ಟೊಂದು ಹೇಗೆ ಓದಲಿ?’ ಕತೆ ತುಂಬಾ ಚೆನ್ನಾಗಿದೆ. ಮಕ್ಕಳಿಗೆ ಅಷ್ಟೇ ಅಲ್ಲ, ಜಾಸ್ತಿ ಕೆಲಸ ಇದೆ ಅಂತ ಹಪಹಪಿಸುವವರಿಗೆ ಉತ್ತಮ ಮಾರ್ಗದರ್ಶನ ನೀಡುತ್ತದೆ

—ಧನಲಕ್ಷ್ಮಿ ಪುರುಷೋತ್ತಮ್ ರಾವ್, ಕೋಲಾರ

## ಅರಿವು ಮೂಡಿಸುವ ಲೇಖನ

ಆ. 12ರ ಸಂಚಿಕೆಯಲ್ಲಿ ಪ್ರಕಟವಾದ ಉಮಾ ಅನಂತ್ ಅವರ ‘ಮಕ್ಕಳನ್ನು ಕಾಡುವ ವಿಷನ್ ಸಿಂಡ್ರೋಮ್’ ಲೇಖನ ಅರ್ಥಪೂರ್ಣವಾಗಿತ್ತು. ಮಕ್ಕಳು ಸದಾ ಮೊಬೈಲ್ ನೋಡುವುದರಿಂದ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುವುದಲ್ಲದೆ ಅವರ ಕಣ್ಣುಗಳಿಗೂ ತೊಂದರೆಯಾಗುತ್ತದೆ. ಹೀಗೇ ಮುಂದುವರಿದರೆ ಚಿಕ್ಕ ವಯಸ್ಸಿನಲ್ಲೇ ಮಕ್ಕಳು ಕಣ್ಣಿನ ತೊಂದರೆ ಅನುಭವಿಸಬೇಕಾಗುತ್ತದೆ. ಈ ನಿಟ್ಟಿನಲ್ಲಿ ಈ ಲೇಖನ ಉಪಯುಕ್ತ ಮಾಹಿತಿ ನೀಡಿದೆ.

—ಎಚ್. ಆರ್. ವಸ್ತ್ರದ, ಧಾರವಾಡ

## ಖಂಡವಿದೆಕೋ ಮಾಂಸವಿದೆಕೋ

‘ಖಂಡವಿದೆಕೋ ಮಾಂಸವಿದೆಕೋ’ ಮುಖಪುಟ ಲೇಖನದಲ್ಲಿ (ಆ. 12) ಟಿ. ಎಂ. ಶಿವಶಂಕರ್ ಅವರು ‘ಸುಧಾ’ ಮೂಲಕ, ಪಶ್ಚಿಮಘಟ್ಟಗಳಲ್ಲಿ ಕಣ್ಣ ಮುಂದೆ ಆಗುತ್ತಿರುವ ಅನ್ಯಾಯ, ಅಕ್ರಮಗಳನ್ನು ಎಳೆ ಎಳೆಯಾಗಿ ಬಿಡಿಸಿಟ್ಟಿರುವುದು ಅಭಿನಂದನಾರ್ಹ.

ನಿಸರ್ಗವನ್ನು ಕಾಪಾಡುವುದು ಪ್ರತಿಯೊಬ್ಬರ ಹೊಣೆ. ಕಾಲ ಇನ್ನೂ ಮಿಂಚಿಲ್ಲ, ಅಭಿವೃದ್ಧಿ ಹೆಸರಲ್ಲಿ ನಡೆಯುತ್ತಿರುವ ಕಾರ್ಯಗಳನ್ನು ಈ ಕೂಡಲೇ ಸ್ಥಗಿತಗೊಳಿಸಿ ಆಧುನಿಕ ಚಂಡವ್ಯಾಘ್ರರ ಬೆನ್ನು ಮೂಳೆ ಮುರಿಯುವಲ್ಲಿ ಸರ್ಕಾರ ದಿಟ್ಟ ಹೆಜ್ಜೆ ಇಡುವಂತಾಗಲಿ.

—ಬೆಂ. ಮು. ಮಾರುತಿ, ಬೆಂಗಳೂರು

## ಸಾರಸ್ವತ ಮ್ಯೂಸಿಯಂ

ಆ. 12ರ ಸಂಚಿಕೆಯಲ್ಲಿ ಸತ್ಯಮಂಗಲ ಮಹಾದೇವ ಅವರು ‘ಕಲ್ಯಾಣ ಕರ್ನಾಟಕ, ಸಾರಸ್ವತ ಮ್ಯೂಸಿಯಂ’ ಎಂಬ ಮಾಹಿತಿಪೂರ್ಣ ಲೇಖನವನ್ನು ಬರೆದಿದ್ದಾರೆ. ಈ ಲೇಖನಕ್ಕೆ ಪೂರಕವಾಗಿ ಉದಯಭಾನು ಕಲಾಸಂಘದ ಸಾಂಸ್ಕೃತಿಕ ಭವನಕ್ಕೆ ಭೇಟಿ ನೀಡಬಹುದು. ಸಂಘದಲ್ಲಿಯೂ ಇಂತಹುದೇ ಸುಮಾರು 140 ಭಾವಚಿತ್ರಗಳ ಪ್ರದರ್ಶನ ಮತ್ತು ಅಪರೂಪದ ಸುಮಾರು 20 ಸಾವಿರ ಗ್ರಂಥಗಳ ಸಂಗ್ರಹವಿದೆ.

—ಎಂ. ನರಸಿಂಹ, ಬೆಂಗಳೂರು

## ಚಂದದ ಸಂಚಿಕೆ

ಆ. 5ರ ಸುಂದರ ಮುಖಪುಟದ ‘ಸುಧಾ’ ಮನಸಿಗೆ ಮುದನೀಡಿತು. ಕನಸಿನ ಅಂತರಿಕ್ಷಯಾನ, ಆರೋಗ್ಯಮಾಲಿಕೆ, ಫ್ಯಾಷನ್ ಮತ್ತು ಚಿತ್ರಪಟ ಕಥನಗಳು ಇಷ್ಟವಾದವು. ಮಲ್ಲಿಕಾರ್ಜುನ ಹೊಸಪಾಳ್ಯರವರು ರಾಯಕಟ್ಟದ ಹೊಸಪಟ್ಟಣದ ಇತಿಹಾಸ ಲೋಕಕ್ಕೆ ಕರೆದೊಯ್ದರು. ಇಂಥ ಕಥನಗಳು ಇನ್ನಷ್ಟು ಮೂಡಿಬರಲಿ. ಇನ್ನಾದರೂ ನಮ್ಮ ಜನ ನಾಡಿನ ಬಗ್ಗೆ ಹೆಮ್ಮೆ ಬೆಳೆಸಿಕೊಳ್ಳಲಿ.

—ಮಂಗಳಾ ಬಳಿಗಾರ್

### ಪರಿಮಳದ ಹೂವುಗಳ ಚಂದವಳ್ಳಿ

ಆ. 12ರ ಸಂಚಿಕೆಯಲ್ಲಿ ಪದ್ಮನಾಭ ಭಟ್ ಬರೆದಿರುವ ‘ಪರಿಮಳದ ಹೂವುಗಳ ಚಂದವಳ್ಳಿ’ ಲೇಖನ ಓದಿದೆ. ಮದುವೆ ಸಮಾರಂಭವೊಂದರಲ್ಲಿ ಭಾಗವಹಿಸಿದ್ದ, ಜಯಂತಿ ಅವರನ್ನು ನಾನು ಪರಿಚಯಿಸಿಕೊಂಡು ಮಾತನಾಡಿಸಿದ್ದೆ. ‘ಓ ಚಿತ್ರದುರ್ಗ ನನ್ನೂರು’ ಎಂಬ ಉದ್ಗಾರ ತೆಗೆದರು. ದುರ್ಗದ 7ಸುತ್ತಿನ ಕೋಟೆಯನ್ನು ಶತ್ರುಗಳಿಂದ ರಕ್ಷಿಸಿದ ಒನಕೆ ಓಬವ್ವ ಎಂದ ಕೂಡಲೇ ನಮ್ಮ ಸ್ಮೃತಿಪಟಲದಲ್ಲಿ ಬರುವುದು ‘ನಾಗರಹಾವು’ ಚಿತ್ರದ ಜಯಂತಿ ಅವರು. ಈ ಮೂಲಕ ಅವರು ಚಿತ್ರರಸಿಕರ ಮನದಲ್ಲಿ ಚಿರಸ್ಥಾಯಿಯಾಗಿ ಉಳಿದಿದ್ದಾರೆ.

—ಟಿ.ಎಸ್. ಪ್ರತಿಭಾ, ಚಿತ್ರದುರ್ಗ



**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in